**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5037/2023 ಪ್ರಾಸಾ-02
ಚಾಸಾ-02

ದಿನಾಂಕಃ 30-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಪ್ರಸಾದ್ ರೆಡ್ಡಿ |
| **ತಂದೆಯ / ಗಂಡನ ಹೆಸರು** | ಸನ್ನಾರೆಡ್ಡಿ |
| **ವಯಸ್ಸು** | 63 |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ಇತಿನಹಳ್ಳಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಚನ್ನರೆಡ್ಡಿ ನನಗೆ ಅಣ್ಣನಾಗಬೇಕು ಅವರು ಬೂದಿಬೆಟ್ಟದಲ್ಲಿ ವಾಸ ಮಾಡುತ್ತಿರುತ್ತಾರೆ. ಬೂದಿಬೆಟ್ಟಕ್ಕೆ ಯಾವಾಗಾದರೂ ಒಂದು ಸಾರಿ ಹೋಗುತ್ತೇನೆ. ಬೂದಿಬೆಟ್ಟಕ್ಕೆ ಕಚೇರಿ ಕೆಲಕ್ಕೆ ಹೋಗುತ್ತೇನೆ ಯವಾಗಾದರೂ ಒಮ್ಮೆ ನನ್ನ ಅಣ್ಣನ ಮನೆಗೆ ಹೋಗುತ್ತೇನೆ.

ವಿ.ಸಿ. ಮುಖಾಂತರ ಹಾಜರುಪಡಿಸಿದ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ ಮತ್ತು ಅವರ ಮನೆ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ಪೊಲೀಸ್ ಠಾಣೆಯಲ್ಲಿ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ನನ್ನ ಅಣ್ಣ ಬದುಕಿದ್ದಾಗ ಅವರನ್ನು ನಾನು ನೋಡಿಕೊಂಡು ಬಂದಿರುತ್ತೇನೆ. ನನ್ನ ಅಣ್ಣ ಈಗ ತೀರಿಕೊಂಡಿರುತ್ತಾರೆ. ಆರೋಪಿ ಏನು ಮಾಡಿರುತ್ತಾನೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

<u>**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**</u>

ನನ್ನ ಅಣ್ಣನ ಮನೆಯ ಪಕ್ಕದಲ್ಲಿಯೇ ಆರೋಪಿಯ ಮನೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣನ ಆರೋಗ್ಯ ಸರಿ ಇಲ್ಲದೇ ಇದುದ್ದರಿಂದ ನಾನು ಹಾಗಾಗ ಹೋಗಿ ಬೇಟಿ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆ ರೀತಿ ಹೋದಾಗ ಆರೋಪಿ ಮತ್ತು ಅವನ ಹೆಂಡತಿ ಮಧ್ಯೆ ಜಗಳ ಆಗುತ್ತಿತ್ತು ನಾನು ಗಂಡನ ಹೆಂಡತಿ ಮಧ್ಯೆ ಆಗಿರುವ ಜಗಳ ಸಾಮಾನ್ಯ ಜಗಳ ಎಂದು ಸುಮ್ಮನಿದ್ದೆ ಎಂದರೆ ಸರಿಯಲ್ಲ.

ದಿ. 15.08.2023 ರಂದು ರಾತ್ರಿ 8-00 ಗಂಟೆ ನಾನು ನನ್ನ ಅಣ್ಣನ ಜೊತೆ ಮಾತನಾಡುತ್ತಾ ಕೂತಿದ್ದಾಗ ರಾತ್ರಿ 10-40 ಗಂಟೆಗೆ ರಾಮಾಂಜಿ ಗಲಾಟೆ ಮಾಡುವ ಶಬ್ದ ಕೇಳಿ ಹೊರಗೆ ಬಂದು ನೋಡಲಾಗಿ ರಾಮಾಂಜಿ ತನ್ನ ಹೆಂಡತಿ ಲಕ್ಷ್ಮಿ ರವರ ಮೇಲೆ ವರಂಡದಲ್ಲಿ ಜಗಳ ಮಾಡುತ್ತಿದ್ದು ಲಕ್ಷ್ಮಿಯು ಕೆ. ರಾಮಾಪುರ ನರಸಿಂಹಮೂರ್ತಿ ರವರ ಜೊತೆ ಫೋನ್ ನಲ್ಲಿ ಮಾತನಾಡುತ್ತಾಳೆ ಎಂದು ಕೈಗಳಿಂದ ಹೊಡೆಯುತ್ತಿದ್ದರು ನಂತರ ಏಕಾ ಏಕಿ ಒಣಕೆಯನ್ನು ತಂದು ಲಕ್ಷ್ಮಿ ತಲೆಗೆ 2-3 ಬಾರಿ ಹೊಡೆದಿದ್ದು ಲಕ್ಷ್ಮಿ ಕೆಳಗೆ ಬಿದಿದ್ದು ರಾಮಾಂಜಿ ಒಣಕೆ ಅಲ್ಲೆ ಬಿಸಾಕಿ ಹೊರಟು ಹೋಗಿರುತ್ತಾನೆ. ನತಂರ ನಾನು ಹೋಗಿ ನೋಡಲಾಗಿ ಲಕ್ಷ್ಮಿ ತಲೆಯಲ್ಲಿ ಗಾಯವಾಗಿ ರಕ್ತ ಹರಿದು ಸ್ಥಳದಲ್ಲಿಯೋ ಸತ್ತು ಹೋಗಿದ್ದಳು ಎಂದರೆ ಸರಿಯಲ್ಲ. ರಾಮಾಂಜಿ ಲಕ್ಷ್ಮಿ ಗೆ ಹೊಡೆಯಜಲು ಉಪಯೋಗಿಸಿದ ಒಣಕೆ ನೋಡಿದರೆ ಗುರುತಿಸುತ್ತೇನೆಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ಈ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು . ಆರೋಪಿ ಪರ ವಕೀಲರು ಪಾಟೀ ಸ ವಾಲು ಇಲ್ಲ ಎಂದು ಹೇಳಿರುತ್ತಾರೆ**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**